ಓ ಎಸ್ ನಂಬರ 175/2016
ಪಿ ಡಬ್ಲ್ಯೂ

**ದಿನಾಂಕಃ 20.07.2024.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದ**

**1.** ನನ್ನ ಮುಖ್ಯ ವಿಚಾರಣೆಯಲ್ಲಿರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನೀವು ಮುಖ್ಯ ವಿಚಾರಣೆ ಸಲ್ಲಿಸುವ ಸಮಯದಲ್ಲಿ ಶೇಖರ ತುರಮುರಿ ರವರ ಜೊತೆಗೆ ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸರಿಯಲ್ಲ. ನೀವು ಸದರಿ ದಿನದಂದು ಶೇಖರ ತುರಮುರಿ ರವರೊಂದಿಗೆ ಬಂದಿದ್ದರೂ ಸಹ ಬಂದಿರುವುದಿಲ್ಲ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ನನಗೆ ಸಮನ್ಸ ಬಂದಿರುವುದಿಲ್ಲ. ನನಗೆ ಸಾಕ್ಷಿ ನುಡಿಯಲು ನ್ಯಾಯವಾದಿಗಳು ಹೇಳಿರುತ್ತಾರೆ. ಈ ದಾವೆಯಲ್ಲಿನ ವಾದಿ ಈರಪ್ಪ ತುರಮುರಿ. ನಾನು ದಸ್ತಾಜು ಬಹರಗಾರ ಲೈಸನ್ಸನ್ನು ಹೊಂದಿರುತ್ತೇನೆ. ನಾನು ಈ ನ್ಯಾಯಾಲಯದಲ್ಲಿ ಸದರಿ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಪ್ರತಿವಾದಿಯರು ನೋಡಿರುತ್ತೇನೆ ಅವರು ನನಗೆ ಪರಿಚಯ ಇರುತ್ತಾರೆ. ನೀವು ಪ್ರತಿವಾದಿಯನ್ನು ನೋಡಿರುತ್ತೇನೆ ಹಾಗೂ ಪರಿಚಯ ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹಳ್ಳದ ಓಣಿಯಲ್ಲಿ ಇರುತ್ತಾರೆ ಎಂದು ನನಗೆ ಮಾಹಿತಿ ಇರುತ್ತದೆ. ನಾನು ದಾವಾ ಸ್ವತ್ತನ್ನು ನೋಡಿರುವುದಿಲ್ಲ.

2. ದಾವಾ ಆಸ್ತಿಯ ಚೆಕಬಂಧಿ ನನಗೆ ಗೊತ್ತಿಲ್ಲ, ಹಳ್ಳದ ಓಣಿಯಲ್ಲಿರುತ್ತದೆ ಎಂದು ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಎಷ್ಟು ಪಡಸಾಲಿ ಇವೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯ ಉತಾರವನ್ನು ನಾನು ನೋಡಿರುವುದಿಲ್ಲ. ನನಗೆ ದಾವಾ ಸ್ವತ್ತಿನ ವಿಸ್ತೀರ್ಣ ಹಾಗೂ ನಂಬರ ಹೇಳಲು ಆಗುವುದಿಲ್ಲ. ದಾವಾ ಸ್ವತ್ತು ಯಾರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಚಾಂದಶಾಹ ಎಂದು ನೆನಪಿರುತ್ತದೆ ಹೆಸರು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಪ್ರತಿವಾದಿಗಳೊಂದಿಗೆ ಯಾವ ತಾರೀಖಿನಂದು ಮಾತುಕತೆಯಾಗಿರುತ್ತದೆ ಎಂದು ನಿಮಗೆ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ನನಗೆ 2014 ಇಸ್ವಿ ಎಂದು ಗೊತ್ತು ದಿನಾಂಕ

ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನನಗೆ ಎಷ್ಟು ದಿವಸಗಳಲ್ಲಿ ಮಾತುಕತೆ ಎಂದು ನೆನಪಿರುವುದಿಲ್ಲ. ತಿಂಗಳು ಮತ್ತು ದಿನಾಂಕ ನೆನಪಿರುವುದಿಲ್ಲ.

3. ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿದ ಸಾಕ್ಷಿದಾರರ ಪರಿಚಯ ಇರುತ್ತದೆ ಎಂದರೆ ಸಾಕ್ಷಿಯು ಪರಿಚಯ ಇರುತ್ತದೆ ಅವರು ಬೈಲಹೊಂಗಲದವರು ಎನ್ನುತ್ತಾರೆ. ನಿಮಗೆ ಸದರಿರಯವರ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಶಾನೆ ಪಿ 1 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನೀವು ಪ್ರತಿವಾದಿಯರನ್ನು ನೋಡಿರುವುದಿಲ್ಲ ಅವರು ನಿಮಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಮೃತ ಈರಪ್ಪ ರವರ ಮಾತು ಕೇಳಿಕೊಂಡು ಗುರುತುಬಲ್ಲವರು ಎಂದು ಖೊಟ್ಟಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖರೀದಿ ಮಾತುಕತೆ ನಿಮ್ಮ ಸಮಕ್ಷಮ ಆಗಿರುತ್ತದೆ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತನ್ನು 1,75,000/-ರೂಗಳಿಗೆ ಮಾರಾಟ ಮಾಡಲು ಯೋಗ್ಯ ಬೆಲೆ ಇದೆ ಎಂದು ಸೂಚಿಸಿ ನಿಮ್ಮ ಸಮಕ್ಷಮ ಒಪ್ಪಿಕೊಂಡು ದಿನಾಂಕ 29.01.2014 ರಂದು 75,000/- ಮುಂಗಡ ಹಣವನ್ನು ಪಡೆದುಕೊಂಡು ಕಬ್ಜಾರಹಿತ ಖರೀದಿ ಕರಾರು ಪತ್ರ ನಿಶಾನೆ ಪಿ 1 ರಂತೆ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತೀದ್ದಿರಿ ಎಂದರೆ ಸರಿಯಲ್ಲ.

4. ಪ್ರತಿವಾದಿಯರು ಸಂತೋಷ ಕಿವುಡಸೋಮಣ್ಣವರ ದಸ್ತಾವೇಜ ಬರಹಗಾರರಿಗೆ ಮಾಹಿತಿ ಕೊಟ್ಟು ನಿಶಾನೆ ಪಿ 1 ನ್ನು ತಯಾರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ವಾದಿ ಕರೆದಾಗ ಉಳಿದ 1,00,000/- ರೂ ಪಡೆದುಕೊಂಡು ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾಳೆ ಎನ್ನುವ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ನೀವು ಸದರಿ ವ್ಯವಹಾರದಲ್ಲಿ ಹಿರಿಯತನ ಮಾಡಿರುತ್ತೀರಿ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ಮೃತ ಈರಪ್ಪ ರವರು ನಿಮ್ಮೊದಿಗೆ ಒಳ್ಳೆಯ ಬಾಂಧವ್ಯ ಹೊಂದಿರುತ್ತಾರೆ ಎಂದರೆ ಸಾಕ್ಷಿ ಪರಿಚಯ ಇರುತ್ತದೆ ಒಳ್ಳೆಯ ಬಾಂಧವ್ಯ ಇರುವುದಿಲ್ಲ ಎನ್ನುತ್ತಾರೆ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಕೀರ್ತಿ ಪೈನಾನ್ಸನಲ್ಲಿ ತೆಗೆದುಕೊಂಡ ಸಾಲದ ಬಾಬತ್ತ ಭದ್ರತೆಗಾಗಿ ಮಾತ್ರ ಆಗಿರುತ್ತದೆ ಎಂದರೆ

ಸರಿಯಲ್ಲ. ನಿಶಾನೆ ಪಿ 1 ಸಾಲದ ಭದ್ರತೆಗಾಗಿ ಮಾಡಿದ ಒಂದು ಕರಾರು ಪತ್ರ ಆದರೆ ಖರೀದಿ ಕರಾರು ಅಲ್ಲ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನ ಮಾರುಕಟ್ಟೆಯ ಮೌಲ್ಯ 2014 ರಲ್ಲಿ 8 ರಿಂದ 10 ಲಕ್ಷ ಇತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಬೆಲೆ 2014 ರಲ್ಲಿ 8 ರಿಂದ 10 ಲಕ್ಷ ಇದ್ದರೂ ಸಹ ಅಷ್ಟು ಮೌಲ್ಯ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಮೌಲ್ಯ 8-10 ಲಕ್ಷ ಇದ್ದು ಕೇವಲ 1,75,000/-ರೂಗಳಿಗೆ ಮಾರಾಟ ಮಾಡಲು ಅಸಾಧ್ಯ ಎಂದರೆ ಸರಿಯಲ್ಲ. ನೀವು ವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

sd/-
ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾ ದಂ. ನ್ಯಾ ಬೈಲಹೊಂಗಲ